ಪಿ.ಡಬ್ಲ್ಯುಃ 1

ದಿನಾಂಕಃ 23-02-2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-

1925 ರಲ್ಲಿ ಆಗ ವಿಭಾಗ ಪತ್ರದಲ್ಲಿ 4 ಭಾಗ ಎಂದು ತಿಳಿಸಲಾಗಿದೆ. ಸದರಿ ನೊಂದಾಯಿತ ವಿಭಾಗ ಪತ್ರವನ್ನು ನಾನು ನೋಡಿದ್ದೇನೆ. 1 ನೇ ಭಾಗ ಮೇದಪ್ಪ ಅವರ ಅಣ್ಣನ ಮಕ್ಕಳು ಸೋಮಯ್ಯ ಹಾಗೂ ಸುಬ್ಬಯ್ಯ ಎಂದರೆ ಸರಿ. 2 ನೇ ಭಾಗ ಅಯ್ಯಪ್ಪರವರ ಮಗ ಕುಟ್ಟಪ್ಪ ಎಂದರೆ ಸರಿ. 3 ನೇ ಭಾಗ ಕರುಂಬಯ್ಯನ ಮಗ ಪೂವಯ್ಯ ಎಂದರೆ ಸರಿ. 4 ನೇ ಭಾಗ ಪೊನ್ನಪ್ಪನವರ ಮಕ್ಕಳು ಪೂವಯ್ಯ ಹಾಗೂ ಮಾದಯ್ಯ ಎಂದರೆ ಸರಿ. ನಾನು ಅಯ್ಯಪ್ಪ ರವರ 2 ನೇ ಮಗ ಎನ್ನುತ್ತಾರೆ. 2 ನೇ ವಾದಿ ಅಯ್ಯಪ್ಪನವರ 1 ನೇ ಮಗ. ಪ್ರತಿವಾದಿಯರು 1 ನೇ ಭಾಗದವರು.

ನಮ್ಮ ಭಾಗದ ಪರವಾಗಿ ನಾನು ಹಾಗೂ 2 ನೇ ವಾದಿ ದಾವೆ ಸಲ್ಲಿಸಿದ್ದೆವು. ನಮ್ಮ ಭಾಗದಲ್ಲಿ ಹಲವು ಜನರಿದ್ದಾರೆ ಆದರೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಸಹೋದರ ಮಾತ್ರ ಎನ್ನುತ್ತಾರೆ 2 ನೇ ವಾದಿ ತಮ್ಮ ಭಾಗಕ್ಕೆ ಸಂಬಂಧಿಸಿದಂತೆ ಸಹಿ ಮಾಡಿದ್ದಾರೆ. 2 ನೇ ವಾದಿಯ ಭಾಗದಲ್ಲಿ 5 ಜನ ಇದ್ದಾರೆ. ಪಿ.ಎಂ. ಸೋಮಯ್ಯ ನಲ್ಲೂರಿನಲ್ಲಿ ವಾಸವಿದ್ದಾರೆ. ಪಟ್ಟೇದಾರರು ಎಂದರೆ ಕುಟುಂಬದ ಹಿರಿಯರು, ಪಟ್ಟೇದಾರರಿಗೆ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿ. ಕೊಡಗಿನ ಸಂಪ್ರದಾಯದಲ್ಲಿ ಜಮಾ ಬಂಧಿಯ 3 ನೇ ಕಲಂ ನಲ್ಲಿ ಪಟ್ಟೇದಾರರ ಹೆಸರು ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ನಮೂದು ಆಗುತ್ತದೆ ಎಂದರೆ ಸರಿ. ಪಟ್ಟೇದಾರರು ಮೃತರಾದರೆ ನಂತರದ ಹಿರಿಯ ಸದಸ್ಯರು ಆ ಸ್ಥಾನಕ್ಕೆ ಬರುತ್ತಾರೆ ಎನ್ನುತ್ತಾರೆ.

ನಿಪಿ 1 ರಲ್ಲಿ ಮೇದಪ್ಪನವರು ಕಟುಂಬದ ಹಿರಿಯರಾಗಿ ಅವರು ಹೆಸರು ನಮೂದು ಆಗಿದೆ ಎಂದರೆ ಸರಿ. ನಿಪಿ 2 ರಿಂದ 4 ರಲ್ಲಿ ಕುಟ್ಟಪ್ಪನವರ ಹೆಸರು ನಮೂದಾಗಿದೆ ಎಂದರೆ ಸರಿ. ನಿಪಿ 6 ಜಮಾಬಂಧಿಯಲ್ಲಿ ಕೆಲವು ಆಸ್ತಿಗಳು ನಾಣಯ್ಯರವರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ. ಕೆಲವು ಆಸ್ತಿಗಳು ಕುಟ್ಟನವರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ.

ಪಟ್ಟೇದಾರರು ಎಂಬ ಸಂಗತಿ ಈಗ ಅಂದರೆ 2001 ರಿಂದ ರದ್ದಾಗಿದೆ ಎಂದರೆ ಸರಿ.

ಸ.ನಂ. 222 ರ ಪಹಣಿ ಹಾಜರುಪಡಿಸಿದ್ದೇನೆ. ದಾಖಲಾತಿಗಳನ್ನು ನೋಡಿ ಸ.ನಂ. 222 ರ ಪಹಣಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಿಪಿ 9 ಸ.ನಂ. 226 ನನ್ನ ಪ್ರಕಾರ ಕೆರೆ ಎನ್ನುತ್ತಾರೆ. ನಿಪಿ 9 ರಲ್ಲಿ ಕೆರೆ ಎಂದು ನಮೂದು ಆಗಿಲ್ಲ ಎಂದರೆ ಸರಿ. ಹಿಂದೆ ಕೆರೆ ಎಂದು ನಮೂದಾಗಿತ್ತು ಎನ್ನುತ್ತಾರೆ. ಪಹಣಿ ನೋಡಿದ ನಂತರ ಕೆರೆ ರದ್ದಾಗಿರುವುದು ತಿಳಿಯಿತು. ಆನಂತರ ತಕರಾರು ಸಹ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಪಿಟಿ ಶೀಟನ್ನು ತೋರಿಸಿದ್ದು, ಒಪ್ಪಿ ದ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಂತೆ ಸ.ನಂ 226 ಕಾಣುತ್ತಿಲ್ಲ ಎಂದರೆ ಸರಿ. ಆದರೆ ಕೆರೆಗೆ ಹೊಂದಿಕೊಂಡಂತೆ ಹಾಗೂ ಸ.ನಂ 222 ಹಾಗೂ 223 ಕ್ಕೆ ಹೊಂದಿಕೊಂಡಿದ್ದೆ ಎನ್ನುತ್ತಾರೆ. ಸ.ನಂ. 222 ಹಾಗೂ 223 ಕ್ಕೆ ಪೂ. ಸ.ನಂ 226 ಇದೆ ಎನ್ನುತ್ತಾರೆ. ಸ.ನಂ.226 ಸಹ ಗ್ರಾಮ ನಕ್ಷೆಯಲ್ಲಿ ಇದೆ ಎನ್ನುತ್ತಾರೆ. ಸದರಿ ನಕ್ಷೆಯನ್ನು ನಾನು ನೋಡಿದ್ದೇನೆ ಹಾಗೂ ನನ್ನ ಬಳಿ ಇದೆ ಎನ್ನುತ್ತಾರೆ.

ದಾವಾ ಎ ಶೆಡ್ಯೂಲ್ ಆಸ್ತಿಗಳು ಮೂರು ಸ.ನಂ.ಗಳು ಒಂದಕೊಂದು ಹೊಂದಿಕೊಂಡಿವೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಗಳು ಮೂರು ಸಹ ಕೆರೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ ನಲ್ಲಿ ತೋರಿಸಿರುವ ಜಮಾ ವೆಟ್ ಲ್ಯಾಂಡ್ ನ ಸ.ನಂ.221/3 ಎ ಅದರ ವಿಸ್ತೀರ್ಣ ಗೊತ್ತಿಲ್ಲ. ಎ ಶೆಡ್ಯೂಲ್ ಆಸ್ತಿಯ ಚೆಕ್ಕುಬಂಧಿಯನ್ನು ಅನುಭಾವ ಆಧಾರದ ಮೇಲೆ ನಮೂದಸಿದ್ದೇವೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ಉತ್ತರಕ್ಕೆ ತೋರಿಸುವ ಸ.ನಂ. 153/4 ಎ ನಿಡಿ 1 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಅದನ್ನು ತೋರಿಸಿದರೆ ಕಾಣುತ್ತದೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ತೋರಿಸುವ ಆಸ್ತಿಯ ಸ.ನಂ. ನನಗೆ ಗೊತ್ತಿಲ್ಲ. ಪೂ. ತೋರಿಸಿರುವ ಸ.ನಂ. 224/6 ಕಾಫಿ ತೋಟ ಆಗಿರುತ್ತದೆ. ಸ.ನಂ. 224/6 ನಿಡಿ 1 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಅದನ್ನು ತೋರಿಸಿದರೆ ಕಾಣುತ್ತದೆ ಎನ್ನುತ್ತಾರೆ. ಪ. ತೋರಿಸಿರುವ ಸ.ನಂ. 221/4 ಕಾಫಿ ತೋಟ ಆಗಿರುತ್ತದೆ.

ದಾವಾ ಬಿ ಶೆಡ್ಯೂಲ್ ಆಸ್ತಿ 92 ಸೆಂಟ್ ಪೂರ್ತಿ ಕೆರೆ ಆಗಿರುತ್ತದೆ. ಕೆರೆಯ ಕೆಳಗಡೆ ವೆಟ್ ಲ್ಯಾಂಡ್ ಇದೆ, ಅದರ ಸ.ನಂ. 221/3 ಎ ಇದೆ ಹಾಗೂ ಅದರ ನಂತರ ಸ.ನಂ. 221/1, 221/2,221/3 ವೆಟ್ ಲ್ಯಾಂಡ್ ಇದೆ ಎನ್ನುತ್ತಾರೆ. ಕೆರೆಯಿಂದ ನಮ್ಮ ಆಸ್ತಿಗೆ 300 ಗಜ ಎನ್ನುತ್ತಾರೆ. ನಾವು ಬಿ ಶೆಡ್ಯೂಲ್ ಆಸ್ತಿಯ ಚೆಕ್ಕು ಬಂಧಿಯಲ್ಲಿ ದಕಿಕ್ಷಣಕ್ಕೆ, ಪೂರ್ವಕ್ಕೆ, ತೋರಿಸಿರುವ ಆಸ್ತಿ

ಯಾವ ಸ.ನಂ. ಎಂದು ನನಗೆ ಗೊತ್ತಿಲ್ಲ. ನಿಡಿ 1 ರಲ್ಲಿ ಸ.ನಂ. 222 ರ ಉತ್ತರಕ್ಕೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxxx-
ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಪೊನ್ನಂಪೇಟೆ.

(ಸಾಕ್ಷಿಯ ಸಹಿ)